ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 39-42
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ನಿಪ್ಪಾಣಿಕರ ದೇಸಗತಿ: ಒಂದು ಅಧ್ಯಯನ

**ಡಾ. ವಿಜಯಮಾಲಾ ನಾಗನೂರಿ**
ಕನ್ನಡ ಉಪನ್ಯಾಸಕರು, ಎಸ್.ಎಸ್ ಕಲಾ ಹಾಗೂ ಟಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಸಂಕೇಶ್ವರ.

***Abstract:***
*ಡೆಕ್ಕನ್ನಿನ ಇತಿಹಾಸದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರಗಳು ಮಹತ್ವದ ಕೊಡುಗೆಯನ್ನು ನೀಡಿವೆ. 17ನೇ ಶತಮಾನದ ಉತ್ತರಾರ್ಧದಲ್ಲಿ ವೈಭವಯುತವಾದ ರಾಜ ಮನೆತನಗಳು (ದೇಸಗತಿಗಳು) ತಮ್ಮದೇ ಆದ ಐತಿಹಾಸಿಕ ಹೆಗ್ಗಳಿಕೆಗೆ ಪಾತ್ರವಾಗಿವೆ. ಬೆಳಗಾವಿ ಜಿಲ್ಲೆಯ ಇತಿಹಾಸದಲ್ಲಿ ನಿಪ್ಪಾಣಿಕರ ದೇಸಗತಿಯು ತನ್ನದೇ ಆದ ಮಾನ್ಯತೆಯನ್ನು ಪಡೆದುಕೊಂಡಿದೆ. ಬೆಳಗಾವಿ ಜಿಲ್ಲೆಯಲ್ಲಿ ಬರುವ ದೇಸಗತಿಗಳು ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳ ಈಗಿನ ರಾಜಕೀಯ ಸೀಮೆಗಳ ಗಡಿ ಪ್ರದೇಶವಾಗಿದೆ. ಸದ್ಯ ಈಗ ಕರ್ನಾಟಕದಲ್ಲಿ ಉಳಿದುಕೊಂಡಿವೆ. ಇವು ಪೇಶ್ವೆಗಳು, ಆದಿಲ್‌ಶಾಹಿಗಳು ಹಾಗೂ ಮರಾಠಾ ಸಾಮ್ರಾಟರು ಆಳಿದ ಪ್ರದೇಶಗಳಾಗಿವೆ. ಹೀಗಾಗಿ ಮರಾಠಿ, ಉರ್ದು, ಕನ್ನಡ ಈ ಪ್ರದೇಶ ಸ್ಥಳೀಯ ಭಾಷೆಗಳಾಗಿವೆ. ಪ್ರಸ್ತುತ ಲೇಖನದಲ್ಲಿ ನಿಪ್ಪಾಣಿಕರ ದೇಸಗತಿಯ ಬಗ್ಗೆ ಅಧ್ಯಯನ ಮಾಡಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ಮಹಾರಾಷ್ಟ್ರ, ನಿಪ್ಪಾಣಿಕರ ದೇಸಗತಿಗಳು, ಬೆಳಗಾವಿ, ಗಡಿ ಪ್ರದೇಶ.*

**ಪೀಠಿಕೆ**

ಉತ್ತರ ಭಾರತದಲ್ಲಿ ಮರಾಠಾ ಸರದಾರರಾದ ಹೊಳಕರ, ಗಾಯಕವಾಡ, ಪವಾರ (ಸಿಂಧ ಮುಂತಾದ ಸರದಾರರು ತಮ್ಮ ಶೌರ್ಯ ಹಾಗೂ ಕತೃತ್ವ ಶಕ್ತಿಗಳಿಂದ ತಮ್ಮ ತಮ್ಮ ಸಂಸ್ಥಾನಗಳನ್ನು ಸ್ಥಾಪಿಸಿ ವಿಸ್ತರಿಸಿ, ಆಳಿದರಲ್ಲದೇ ಅತಿ ದಕ್ಷ ಆಡಳಿತಗಾರರೆಂದು ಹೆಸರು ಪಡೆದರು. ದಕ್ಷಿಣ ಭಾರತದಲ್ಲಿ ಪಟವರ್ಧನ, ಘೋರ್ಪಡೆ, ಭಾವೆ, ದೇಸಾಯಿ ಇತ್ಯಾದಿ ಮರಾಠಾ ಸಂಸ್ಥಾಪಕರು, ತಮ್ಮ ಸುತ್ತಲಿನ ಪ್ರಾಂತ್ಯಗಳನ್ನು ಜಯಿಸಿ ಮರಾಠಾ ಆಡಳಿತವನ್ನು ಶ್ರೀಮಂತಗೊಳಿಸಿದರು.

ನಿಪ್ಪಾಣಿಕರ ದೇಸಗತಿ ಅಥವಾ ನಿಪ್ಪಾಣಿ ಸರಕಾರವೆಂದು ಹೆಸರು ಪಡೆದ ನಿಪ್ಪಾಣಿಯ ರಾಜ ವಂಶವು ಮೂಲತಃ ಮಧ್ಯಭಾರತದ ಉಜ್ಜಯಿನಿಯ ವಿಕ್ರಮಾಧಿತ್ಯನ ವಂಶದವರಾಗಿದ್ದಾರೆ. ಇವರು ದಕ್ಷಿಣ ಭಾರತಕ್ಕೆ ಬಂದು ಫಾಲಟನ್ ಬಳಿ ರಾಜ್ಯ ಸ್ಥಾಪನೆ ಮಾಡಿ ನಂತರ ನಿಂಬಾಳಕರ ಎಂದು ಹೆಸರು ಪಡೆದು ನಿಪ್ಪಾಣಿಯಲ್ಲಿ ತಮ್ಮ ನೆಲೆಯನ್ನು ಸ್ಥಾಪಿಸಿದರು. ನಿಪ್ಪಾಣಿ ಐತಿಹಾಸಿಕವಾಗಿ ವೈಭವವನ್ನು ಹೊಂದಿರುವ ಪಟ್ಟಣವಾಗಿದ್ದು, ಇದು ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಪ್ರದೇಶವಾಗಿದೆ. ನಿಪ್ಪಾಣಿಕರ ದೇಸಗತಿಯು ಸುಮಾರು 500 ವರ್ಷಗಳ ಇತಿಹಾಸವನ್ನು ಹೊಂದಿದೆ. ಮೊದಲು ಇವರು ಉಜ್ಜಯಿಣಿಯ ನಿಂಬಸ (ನಿಂಬಳ)ಗಳ ಸುತ್ತಲಿನ ಪ್ರದೇಶದಲ್ಲಿ ನೆಲೆ ನಿಂತಿದ್ದರು. ಅದಕ್ಕೆ ಈ ವಂಶಕ್ಕೆ ನಿಂಬಾಳಕರ ಎಂಬ ಹೆಸರು ಬಂದಿದೆ. ಬಿಜಾಪೂರದ ಆದಿಲ್ ಶಾಹ್ ಇವರ

***Please cite this article as:*** ವಿಜಯಮಾಲಾ ನಾಗನೂರಿ. (2024). ನಿಪ್ಪಾಣಿಕರ ದೇಸಗತಿ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 39–42.

ಸಾಮರ್ಥ್ಯವನ್ನು ಗಮನಿಸಿ ಇವರನ್ನು ಬಿಜಾಪುರಕ್ಕೆ ಕರೆದೊಯ್ದನು. ಅಲ್ಲಿ ಶ್ರೀ ಸಿದೂಜಿರಾವ್ ಅಪ್ಪಾ ದೇಸಾಯಿ ಅವರನ್ನು 100 ಕುದುರೆಗಳ ಮುಖ್ಯಸ್ಥನನ್ನಾಗಿ ಮಾಡಿದನು. ನಂತರ ಇವರು ಆದಿಲ್ ಶಾಹ್‌ನಿಂದ ದೇಸಗತಿ ಪಟ್ಟ ಪಡೆದು ನಿಪ್ಪಾಣಿಯಲ್ಲಿ ತಮ್ಮ ನೆಲೆಯನ್ನು ಸ್ಥಾಪಿಸಿದರು.

ಬೆಂಗಳೂರು–ಪುಣೆಯ ರಾಷ್ಟ್ರೀಯ ಹೆದ್ದಾರಿಯ ಮಧ್ಯಭಾಗದಲ್ಲಿ ಬರುವ ನಿಪ್ಪಾಣಿಯವಾಡೆಯ (ನಿಪ್ಪಾಣಿಕರ ಸರಕಾರ) ವಂಶಸ್ಥರು ಮೂಲತಃ ನಿಪ್ಪಾಣಿ ಹತ್ತಿರ ಬರುವ ಬೆಡಕಿಹಾಳದ ನಣದಿ ಗ್ರಾಮದವರು ನಣದಿ ದೇಶಾಯಿಗಳು, ದೇಶಮುಖರು, ದೇಶಪಾಂಡೆ ಎಂಬ ಅಡ್ಡ ಹೆಸರಿನಿಂದ ಕರೆಯಲ್ಪಡುವವರಾಗಿದ್ದರು. ಅವರನ್ನು ನಣದಿ ಸರಕಾರ ಎಂಬುದಾಗಿ ಕರೆಯುತ್ತಿದ್ದರು. ಅಲ್ಲಿ ಪ್ರಮುಖವಾಗಿ ಅತಿ ಅಪೇಕ್ಷೀಯ ಧೀಮಂತ ಪರಾಕ್ರಮಿ, ವೀರರುಗಳು ತಮ್ಮದೇ ಆದ ಇತಿಹಾಸವನ್ನು ಹೊಂದಿದ್ದಾರೆ. ಮರಾಠರ ಇತಿಹಾಸದಲ್ಲಿ ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ತಮ್ಮ ಶೌರ್ಯದಿಂದ ಪ್ರಾಂತ್ಯಗಳನ್ನು ಗೆದ್ದು ತಮ್ಮ ಜಹಗೀರ್‌ಗಳನ್ನು ನಿರ್ಮಿಸಿದ ಎಲ್ಲ ಶ್ರೇಷ್ಠ ಕುಟುಂಬಗಳಲ್ಲಿ ನಿಪ್ಪಾನಿಕರ ಪೂರ್ವಜರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ.

ನಿಪ್ಪಾಣಿ ವಾಡೆಯ ಕುರಿತು ಹೇಳುವುದಾದರೆ King among Wada's ಇದು ಪುಣೆಯ ಶನಿವಾರ ವಾಡೆಯನ್ನು ಹೋಲುತ್ತದೆ. ನಿಪ್ಪಾಣಿ ವಾಡೆಯು ಸಹ–ಕಲೆ, ಸಂಸ್ಕೃತಿ, ಸಾಹಿತ್ಯ, ನ್ಯಾಯ ಆಡಳಿತ, ವಾಸ್ತು, ಶಿಕ್ಷಣ ಇತ್ಯಾದಿಗಳಿಗೂ ತಮ್ಮನ್ನು ತಾವು ಮೀಸಲಿರಿಸಿಕೊಂಡಿದ್ದಾರೆ. ಅತಿ ಚಿಕ್ಕ ಪುಟ್ಟ ಆಡಳಿತಗಳಲ್ಲಿ ನಿಪ್ಪಾಣಿಯ ಒಡೆಯರಾದ ನಿಂಬಾಳಕರ ಮನೆತನವು ಒಂದು.

ನಣದಿ ದೇಸಾಯಿ ಕುಟುಂಬದ ಶ್ರೀ ಸಿದೂಜಿರಾವ್ ಅಪ್ಪಾ ದೇಸಾಯಿ ನಾಯಕ್ ನಿಪ್ಪಾಣಿಕರ ದೇಸಗತಿಯ ಸಂಸ್ಥಾಪಕ. ಪ್ರಾರಂಭದಲ್ಲಿ ಒಂದು ನೌಕರಿಯ ಹುಡಕಾಟಕ್ಕಾಗಿ ಗ್ವಾಲಿಯರ, ಪುಣೆ, ಇಂದೋರ್ ಪ್ರದೇಶಗಳನ್ನು ಸುತ್ತಾಡಿದರು. ನಂತರ ಬಿಜಾಪುರ ಆದಿಲ್ ಶಾಹಿಗಳ ಅರಮನೆಯಲ್ಲಿ ಪ್ರವೇಶ ಪಡೆದುಕೊಳ್ಳುತ್ತಾನೆ. ಆದಿಲ್ ಶಾಹಿಯ ಒಂದು ಕುದುರೆ ಬಹಳ ಮೊಂಡತನವನ್ನು ಮಾಡುತ್ತಿತ್ತು. ಅದನ್ನು ಪಳಗಿಸಿ ಸವಾರಿ ಮಾಡಿ ಏಕಕಾಲಕ್ಕೆ, ಹುಕ್ಕೇರಿ, ಬೆಳಗಾವಿ, ದಾಂಡೇಲಿಗಳನ್ನು ಸುತ್ತಿಕೊಂಡು ಒಂದನೂರಾಎಪ್ಪತ್ತಮೂರು ಹಳ್ಳಿಗಳನ್ನು ಪರಿಕ್ರಮಿಸಿ ತಿರುಗಿಬಂದು, ಆ ಕುದುರೆಯನ್ನು ಸಾಧುವಾಗಿ ಮಾಡಿದ್ದರಿಂದ ಮತ್ತಷ್ಟು ಪರಾಕ್ರಮಿಯಾಗಿ 'ಸಾವಿರಕುದುರೆಗಳ ಸರದಾರ ಎಂಬ ಹೆಸರನ್ನು ಪಡೆದರು. 173 ಹಳ್ಳಿಗಳನ್ನು ಸನದ ಮಾಡಿ ಆನಂದಿತನಾಗಿ ನಿಂಬಾಳಕರ ಅವರಿಗೆ, 'ದೇಸಗತಿ' ಎಂಬ ಪಟ್ಟವನ್ನು ನೀಡಿ ಗೌರವಿಸಿದರು. ಆಗಿನಿಂದ ಈ ವಂಶವು ನಿಪ್ಪಾಣಿ ದೇಸಗತಿ ಎಂಬ ಹೆಸರಿನಿಂದ ವಿಸ್ತಾರವಾಗಿ ಬೆಳೆಯಿತು. ಈ ರೀತಿ ನಿಂಬಾಳಕರ ಎಂಬ ಹೆಸರು ಇತಿಹಾಸದಲ್ಲಿ ದಾಖಲಾಗಿದೆ. ಆದರೆ ನಿಂಬಾಳಕರ ವ್ಯಕ್ತಿಯ ವಯಕ್ತಿಕ ವಿವರಗಳು ಎಲ್ಲಿಯೂ ಕಾಣಸಿಗುವುದಿಲ್ಲ. ಮೂಲತಃ ಕ್ಷತ್ರಿಯರಾದ ನಿಂಬಾಳಕರ್ ಕೊಲ್ಲಾಪುರದ ಶಾಹು ಮನೆತನದ ಬದ್ಧ ಎದುರಾಳಿಗಳಾಗಿ ಬೆಳೆದರು.

ಕಾಲಾಂತರದಲ್ಲಿ ನಿಪ್ಪಾಣಿಕರ ದೇಸಗತಿಯ ಸಂಸ್ಥಾಪಕ ಸಿದ್ದೋಜಿರಾವ್ ಅಪ್ಪಾ ದೇಸಾಯಿ ನಾಯಕ್ ನಿಂಬಾಳಕರ ಸರಲಷ್ಕರ. (1774 – 1839) ಈ ಮನೆತನದ ಶ್ರೇಷ್ಠತೆಯನ್ನು ಎಲ್ಲಾ ದಿಕ್ಕುಗಳಿಗೆ ಪಸರಿಸಿ ಕೀರ್ತಿ ಪಡೆದನು. ಇವನು ಈಗಿನ ನಿಪ್ಪಾಣಿ ಕೋಟೆ ಹಾಗೂ ವಾಡೆಗಳನ್ನು ನಿರ್ಮಿಸಿ ನಿಪ್ಪಾಣಿ ನಗರದ ಜನಕನೆಂದು ಪ್ರತೀತಿ ಪಡೆದನು. ಶ್ರೀಮಂತ ಸಿದೋಜಿರಾವ್ ಅಪ್ಪಾ ದೇಸಾಯಿ ನಾಯಕ್ ಇವರು ಸ್ವ ಶಕ್ತಿಯಿಂದ ನಿಪ್ಪಾಣಿಯನ್ನು ಹಾಗೂ ಸುತ್ತಲಿನ ಇನ್ನಷ್ಟು ಪ್ರದೇಶಗಳನ್ನು ಗೆದ್ದನು.

ಪ್ರಾರಂಭದಲ್ಲಿ ಶ್ರೀಮಂತ ಸಿದ್ದೋಜಿರಾವ್ ಅವರು ಸಖಾರಾಮ ಘಾಟ್ಗೆಯವರ ಜೊತೆಗೆ ಸ್ನೇಹವನ್ನು ಹೊಂದಿದ್ದರು. ಅವರು ದೆಹಲಿಗೆ ಹೋದ ನಂತರ ನಿಪ್ಪಾಣಿಯ ಪ್ರಾಂತ್ಯದ ಆಡಳಿತವನ್ನು ಆದಿಲ್ ಶಾಹಿಗಳು ಶ್ರೀಮಂತ ಸಿದ್ಧೋಜಿರಾವ್ ಅಪ್ಪಾ ದೇಸಾಯಿ ಅವರಿಗೆ ಕೊಟ್ಟರು. ಇಲ್ಲಿ ಪಂಚಗಂಗಾ ನದಿಯ ಕಣಿವೆಯ ಪನ್ಹಾಳ್, ಭೂದರ್ಗಡ, ಸಮಾಗಂಡ, ವಲ್ಲಭಗಡ (ಹರಗಾಪೂರಗಡ) ಮೊದಲಾದ ಕೋಟೆಗಳು ನಿರ್ಮಾಣಗೊಂಡಿವೆ.

ಬಿಜಾಪುರದ ಆದಿಲ್ ಶಾಹಿಗಳು ಶ್ರೀಮಂತ ಸಿದ್ಧೋಜಿರಾವ್ ನಿಂಬಾಳಕರ್ ಅವರಿಗೆ 14 ಎಲ್ಲೆಗಳನ್ನು ಉಡುಗೊರೆಯಾಗಿ ನೀಡಿದ್ದರು ಹಾಗೂ 1688 ರಲ್ಲಿ ಕೊಣ್ಣುರು, ಶಿರಗುಪ್ಪಿ, ಕೋಡಣಿ, ನಿಪ್ಪಾಣಿ, ಅಕ್ಕೋಳ, ಜತ್ ಗ್ರಾಮಗಳನ್ನು ಪುರಸ್ಕಾರವಾಗಿ ಪಡೆದಿದ್ದರು. ಇವರು 18ನೇ ಶತಮಾನದ ಕೊನೆಯಲ್ಲಿ ರಾಜತಾಂತ್ರಿಕರಾಗಿ ಹೊರಹೊಮ್ಮಿದರು. 1809 ರಲ್ಲಿ ಕೊಲ್ಲಾಪೂರದ ಶಿವಾಜಿಯ ಕೊನೆಯ ಮಗಳಾದ ಭಾಗೀರತಿಬಾಯಿಯನ್ನು ವಿವಾಹವಾದರು.

ಶ್ರೀಮಂತ ಸಿದ್ಧೋಜಿರಾವ್‌ಗೆ ಮಕ್ಕಳಿಲ್ಲ ಎಂಬುದನ್ನು ತಿಳಿದ ಕಂಪನಿ ಸರ್ಕಾರವು ಅವರ ದೇಸಗತಿಯನ್ನು ವಶಪಡಿಸಿಕೊಳ್ಳಲು ನಿರ್ಧರಿಸಿತು. ಇದರಿಂದ ಸಿದ್ಧೋಜಿರಾವ್ ತನ್ನ ಸೋದರನ ಮಗನನ್ನು ದತ್ತು ಪಡೆದುಕೊಂಡು ತಮ್ಮ ದೇಸಗತಿಯನ್ನು ಉಳಿಸಿದರು. ಶ್ರೀಮಂತ ಸಿದ್ಧೋಜಿರಾವ್ ನಂತರ ರಘುನಾಥರಾವ್ ರಾಜೆ, ಮುರಾರರಾವ್ ರಾಜೆ, ಪರಗೌಡಾರಾಜೆ, ರಾಮರಾಜೆ, ಮುರಾರ್‌ರಾವರಾಜೆ, ಅಣ್ಣಾಜಿರಾವ್‌ರಾಜೆ, ಸಿದ್ಧೋಜಿರಾವ್ ರಾಜೆ, ಮುರಾರಾವ್ ದಾದೋಜಿ ರಾವ್‌ರಾಜೆರವರು ನಿಪ್ಪಾಣಿಕರ ದೇಸಗತಿಯನ್ನು ಮುನ್ನಡೆಸಿದರು. ಆದರೆ ಇವರ್‍ಯಾರು ಈ ದೇಸಗತಿಯ ಸಂಸ್ಥಾಪಕರಾದ ಶ್ರೀಮಂತ ಸಿದ್ಧೋಜಿರಾವ್ ನಿಂಬಾಳಕರ ಅವರಂತೆ ಸಮರ್ಥ ಅರಸರಾಗಿ ಹೊರಹೊಮ್ಮಲಿಲ್ಲ. ಅವರೆಲ್ಲ ಸಂಸಾರಸ್ಥರಾಗಿ, ಕೇವಲ ಕೌಟುಂಬಿಕ ಜೀವನಕಷ್ಟೇ ತಮ್ಮನ್ನು ಮೀಸಲಾಗಿಟ್ಟುಕೊಂಡವರು. ಎಲ್ಲರೂ ರಾಜತಾಂತ್ರಿಕ ವಿಷಯದಲ್ಲಿ ಅಸಾಮರ್ಥ್ಯತೆಯನ್ನು ಹೊಂದಿದ್ದರು. ಎನ್ನಬಹುದಷ್ಟೇ. ಹೀಗಾಗಿ ನಿಪ್ಪಾಣಿ ದೇಸಗತಿ ಕೇವಲ ಒಬ್ಬ ವ್ಯಕ್ತಿಯಿಂದ ಸುಮಾರು 65 ವರ್ಷಗಳ ಇತಿಹಾಸವನ್ನು ಸಾರುವ ಒಂದು ವೈಭಯುತವಾದ ಒಂದು ದೇಸಗತಿ ಅಥವಾ ವಾಡೆಯಾಗಿದೆ.

ಪ್ರಸ್ತುತ ಈ ದೇಸಗತಿಯ ರಾಜವಾಡೆಯಲ್ಲಿ ಒಂಬತ್ತನೆಯ ತಲೆಮಾರಿನ ವಂಶಸ್ಥರಾದ ಶ್ರೀ ಮುರಾರರಾವ್ ದಾದೋಜಿರಾವ್ ದೇಸಾಯಿ ನಿಂಬಾಳಕರ ಬಿ.ಎ.,ಎಲ್.ಎಲ್.ಬಿ., ಪದವೀಧರರಾಗಿದ್ದು, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಿಪ್ಪಣಿಕಾರ ದೇಸಗತಿಯ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡಿದರು.

ಒಟ್ಟಾರೆಯಾಗಿ ಈ ನಿಪ್ಪಾನಿಕರ ದೇಸಗತಿಯು ಬೆಳಗಾವಿ ಇತಿಹಾಸದಲ್ಲಿ ತನ್ನದೇಯಾದ ಮಹತ್ವದ ಸ್ಥಾನವನ್ನು ಹೊಂದಿದೆ. ಉತ್ತರಭಾರತ ಮೂಲದವರಾದ ಇವರು ನಮ್ಮ ನಾಡಿಗೆ ಬಂದು ಧೀಮಂತ ದೊರೆಯಾಗಿ ಸ್ವಸಾಮರ್ಥ್ಯದಿಂದ ಸಾಮ್ರಾಜ್ಯವನ್ನು ಕಟ್ಟಿ ನಾಡಿನುದ್ದಕ್ಕೂ ತನ್ನ ಹೆಸರನ್ನು ಮರೆಯದಂತೆ ಅಜರಾಮರವಾಗಿಸಿದ ಖ್ಯಾತಿ ಶ್ರೀ ಶ್ರೀಮಂತ ಸಿದ್ಧೋಜಿರಾವ್ ದೇಸಾಯಿ ನಾಯಕ್ ನಿಂಬಾಳಕರ ಅವರಿಗೆ ಸಲ್ಲುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಬೋಂಗರ್‍ದೆ. ಬಿ.ಪಿ. *ಸಿದ್ಧೋಜಿರಾವ್ ನಿಂಬಾಳಕರ ದೇಸಾಯಿ ಹಾಗೂ ಅವರ ಕಾಲ.*
- *ದೇಸಗತಿ ಮನೆತನದ ಚಿತ್ರಗಳ ಬೆರಗು.* (2018, ಮಾರ್ಚ್ 24). ಪ್ರಜಾವಾಣಿ ದಿನಪತ್ರಿಕೆ.
- ದೇಸಗತಿ ಮಾಹಿತಿ ಅಧ್ಯಯನ ಅಗತ್ಯ. (2019 ಅಕ್ಟೋಬರ್ 6) ವಿಜಯ ಕರ್ನಾಟಕ ದಿನಪತ್ರಿಕೆ.
- ಕೋಶಿ ಎಸ್.ಕೆ. ನಿಪ್ಪಾಣಿ ವಾಡೆ.

- *ಬೆಳಗಾಂವ ಜಿಲ್ಲೆಯ ರಾಜಮನೆತನಗಳು: ಒಂದು ಅಧ್ಯಯನ.*
- *Karnataka State Gazetteer: Belgaum.* (1987). Director of Print, Stationery and Publications at the Government Press. P.131-135
- *History of Belagavi* (2017, June 30). https://klebedbelagavi.org/history-of-belagavi/
- Census of India-2011. (2014). *District census handbook-Belgaum* Directorate of census operations Karnataka.